ಗುರುಪ್ರಸಾದ್ ಕಂಟಲಗೆರೆ

# ಟಿಪ್ಪು

ಅವನ ಹೆಸರು ಟಿಪ್ಪು. ಟಿಪ್ಪು ಎಂದರೆ ಸುಲ್ತಾನ್ ಎಂದೇನು ತಿಳಿಯಬೇಕಿಲ್ಲ. ಅವನ ಅಪ್ಪ ದುರ್ಗಯ್ಯ ಮಗನಿಗೆ ಬೇಕಂತಲೇ ಆ ಹೆಸರು ಇಟ್ಟಿದ್ದ. ಸಾವಿರ ಮನೆಯ ಊರಾದ ಕೊನೆಹಳ್ಳಿಯಲ್ಲಿ ಸಾಬರು ಮತ್ತು ಮಾದಿಗರು ಒಟ್ಟಿಗೆ ಬದುಕುತ್ತಿದ್ದರು. ಮಗಳಿಗೆ ಗಂಡು ನೋಡಲು ಬಂದಿದ್ದ ಮಲ್ಲಿಗೆರೆ ಮರಿಯಣ್ಣ, ಮನೆ ಯಾವುದೆಂದು ತಿಳಿಯದೆ ಪಕ್ಕದ ಮನೆ ಕರೀಂ ಸಾಬ್‌ನೆ ಕರಿಯಪ್ಪ ಅಂದ್ಕಂಡು ಒಪ್ಪಿಕೆಂಡು ಹೋಗಿದ್ದ. ಅಷ್ಟರ ಮಟ್ಟಿಗೆ ಪರಸ್ಪರ ಅನ್ಯ ಧರ್ಮದವರು ಬೆರೆತು ಬದುಕುತ್ತಿದ್ದರು. ಆಹಾರ, ಆಚರಣೆ ಯಾವೊಂದರಲ್ಲೂ ಅಷ್ಟೇನು ವ್ಯತ್ಯಾಸ ಇರಲಿಲ್ಲ. ಕೊಪ್ಲಲ್ಲಿ ಹಾಕ್ಯಂಡು ದೊಡ್ಡುದ ಕುಯ್ಬೇಕಾರೆ ಮಾತ್ರ ಈ ಹಿಂದುಗಳು ಬೇಕಂತಲೆ ಯೂಸೂಫ್ ಅಣ್ಣನಿಗೆ ಮಂತ್ರ ಪಠಿಸಲು ಅವಕಾಶ ಕಲ್ಪಿಸಿದ್ದನ್ನ ಬಿಟ್ರೆ ಉಳಿದಂತೆ ಚರ್ಮ ಎಬ್ಬದ್ರಿಂದ ಹಿಡಿದು ತುಂಡಾಕ್ಯಂಡು ಒಲೆ ಮ್ಯಾಕಿಕ್ಕಿ ಬೇಯ್ಸ್‌ಕಂಡು ತಿನ್ನತನ್ಕನೂ ಒಂದೆ ಆಗಿದ್ರು. ರಮ್ಜಾನ್ ಮಾಸ ಬಂದ್ರಂತೂ ಸಾಬ್ರುಡುಗ್ರು ಜೊತೆಲಿ ಈ ಹುಡುಗ್ರು ಹಸ್ಕಂಡಿರವ್ರು. ಅದಕ್ಕೆ ಕಾರಣ ರೋಜಾ ಎಂದೇನು ಭಾವಿಸಬೇಕಿಲ್ಲ; ರಾಗಿನೂ ತೀರ್ಕಂಡಿರ್ತಿದ್ದು.

ತಮ್ಮಣ್ಣನ ಜಾತ್ರೆ ಮುಗಿದ ಹದಿನೈದು ದಿನಕ್ಕೆ ಬರ ಸಾಬರ ಗುಂಡಿಹಬ್ಬ ಕೊನೆಹಳ್ಳಿಲಿ ಜೋರು. ತಮ್ಮಣ್ಣನ ಜಾತ್ರೆಲಿ ಅಕ್ಕ ಪಕ್ಕದ ಕಲ್ಲೆನಳ್ಳಿ, ನುಲೆನೂರರೆಲ್ಲ ಕೋಳಿ ಪಾಳಿ ಕುಯ್ಕಂಡ್ರೆ. ಈ ಊರರು ಮಾತ್ರ ಕೋಳಿ ಜೊತಿಗೆ ಒಂದ್ ದೊಡ್ಡುದ್ನ ವಡ್ಕಂಡು ಮನಿಗೊಂದ್ ಪಾಲ್ ತಗಂಡೋಗಿ ಮಾಡಿ ಅಕ್ಕ ಪಕ್ಕದ ಸಾಬ್ರನ್ನ ಕರ್ದು ಇಕ್ಕರು. ಈ ಋಣ ಇಕ್ಯಂಡು ಸಾಬ್ರು ತಮ್ಮ ಗುಂಡಿ ಹಬ್ಬದಲ್ಲಿ ಮಾದಿರ್ಗೆ ಅಂತನೆ ವಿಶೇಷವಾದ ಊಟ ಮಾಡ್ಸಿ ಕಾಣರು. ಹಿಂಗೆ ಒಂದ್ ಬೇಸಿಗೆಲಿ ಬಂದ ಗುಂಡಿ ಹಬ್ಬದಲ್ಲಿ ನೆಂಟ್ರು ಇಷ್ಟ್ರುಗಳೆಲ್ಲ ಜಾಸ್ತಿ ಆಗ್ತರೆ. ಮಲ್ಲಿ ಮಲಗಕೆ ಜಾಗ ಇಲ್ಲ, ಎಲ್ಲ ಹಟ್ಟಿಮುಂದೆ ಮನಿಕಂತಿವಿ. ನಿದ್ದೆ ಬರತನ್ಕ ಒಂದ್ ಮನರಂಜನೆ ಇರ್ಲಿ ಅಂತ, ಅದಕ್ಕೆ ಸಂಬಂಧ ಪಟ್ಟ ಮೀಟಿಂಗ್‌ನಲ್ಲಿ ಚರ್ಚಿಸುತ್ತಿರುವಾಗ. ಮೈಸೂರ್ ಕಡೆಯಿಂದ ಬಂದು ನೆಲೆಸಿದ್ದ ಮುಬ್ಬಣ್ಣ 'ನಮ್ ಕಡೆ ಹಳೆ ಹೆಂಗುಸ್ರು, ಟಿಪ್ಪು ಸುಲ್ತಾನ್‌ದು ಕತೆ ಮಾಡ್ತರೆ, ಅವ್ರುನ್ನ ಕರೆಸಿರೆ ಹೆಂಗೆ?' ಅಂದ. ಎಲ್ಲರಿಗೂ ಅದೆ ಒಪ್ಪಿಗೆ ಆಗಿ ಮುಬ್ಬಣ್ಣಂಗೆ ಅವರ್ನ ಕರ್ಕಂಡು ಬರಕೆ ಚಾರ್ಜು ಕೊಟ್ಟು ಕಳಿಸಿರು. ಹಬ್ಬ ನಾಳಿಕೆ ಅನ್ನಂಗೆ ಇವತ್ತ ಸಂಜೆ ಮುಬ್ಬಣ್ಣ ಒಬ್ಬ ಗಂಡ್ಸು, ಎಲ್ಡಾಳು ಹೆಂಗುಸ್ರೊತೆ ಇಳ್ಕಂಡ. ಸಾಬ್ರು ಮಲ್ಲಿ ತೊಳಿಯದು ಬಳಿಯದು ಇರುತ್ತೆ ಅಲ್ಲಿ ಅವ್ರಿರದು ಬೇಡ ದುರ್ಗಯ್ಯನ ಮಲ್ಲೆ ಮಲಗ್ಸನ ಅಂತ ತಂದು ಮನಿಗೆ ಬಿಟ್ರು.

ದುರ್ಗಯ್ಯನ ಹೆಂಡ್ರು ಗಂಗಮ್ಮ ತುಂಬು ಬಸ್ರಿ. ಮಗಳನ್ನ ಕಾಯಕೆ ಅಂತ ಅವ್ರವ್ವ ನಂಜವ್ವ ಬಂದಿದ್ಲು. ಹಿರಿಯೂರ್ ಕಡೆಳಾದ ನಂಜವ್ವ ರಾತ್ರೆಲ್ಲ ನಾಯ್ಕನಟ್ಟಿ ತಿಪ್ಪೆಸ್ವಾಮಿ ಪವಾಡ ಹೇಳಿರೆ